# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

### ಎಸ್.ಸಿ. ನಂ. 2/2019

**ದೋ.ಸಾ. : 03 ಫ್ರಾ.ಸಾ. : 08**

| | | |
|---|---|---|
| ಸಾಕ್ಷಿಯ ಹೆಸರು | : | ದಾಮೋಧರ ನಾಯ್ಕ |
| ತಂದೆಯ ಹೆಸರು | : | ತೋಕು ನಾಯ್ಕ |
| ವಯಸ್ಸು | : | 49 ವರ್ಷ |
| ಕೆಲಸ | : | ಕೂಲಿ ಕೆಲಸ |
| ವಾಸ | : | ಅಲಗೇರಿ, ಅಂಕೋಲಾ |

**ದಿನಾಂಕಃ 23-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

1. ದಿ.13-11-2017 ರಂದು ಬ್ರಹ್ಮೂರಿನಲ್ಲಿ ನಾನು ಕೆಲಸಕ್ಕೆ ಹೋದಾಗ, ಅಂಕೋಲಾ ಪೊಲೀಸರು ನನ್ನನ್ನು ಚಾಸಾ-1 ರವರ ಮನೆಯ ಮುಂದೆ ಪಂಚನಾಮೆಗಾಗಿ ಕರೆಸಿದ್ದರು. ಸದರಿ ಸ್ಥಳದಲ್ಲಿ ಚಾಸಾ-1 ರವರು ಹಾಜರಿದ್ದು, ಗಲಾಟೆಯಾದ ಸ್ಥಳವನ್ನು ತೋರಿಸಿದ ಮೇರೆಗೆ ಪೊಲೀಸರು ನಿಪಿ-2 ರಂತೆ ಪಂಚನಾಮೆ ಮಾಡಿ, ನನ್ನ ಸಹಿ ಪಡೆದುಕೊಂಡರು. ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಅದಾದ ಮೂರು ದಿನಗಳ ನಂತರ, ನಾನು ಬ್ರಹ್ಮೂರಿನಲ್ಲಿ ಕೆಲಸ ಮಾಡುತ್ತಿದ್ದಾಗ, ಪೊಲೀಸರು ನನ್ನನ್ನು ಗಾಯತ್ರಿ ಭಟ್ ರವರ ಮನೆಯ ಬಳಿ ಕರೆದುಕೊಂಡು ಹೋಗಿದ್ದು, ಆ ಸಮಯದಲ್ಲಿ ಪೊಲೀಸರೊಂದಿಗೆ 1 ನೇ ಆರೋಪಿ ಇದ್ದನು. ಅಲ್ಲಿ, ಪೊಲೀಸರು ಒಂದು ಸೀಮೆ ಎಣ್ಣೆಯ ಕ್ಯಾನ್, ಬೆಂಕಿ ಪೊಟ್ಟಣ, ಒಂದು ಪಂಜನ್ನು ನಮಗೆ ತೋರಿಸಿ, ಅವುಗಳನ್ನು ಜಪ್ತುಪಡಿಸಿಕೊಂಡು, ಪಂಚನಾಮೆಗೆ ನನ್ನ ಸಹಿ ಪಡೆದುಕೊಂಡರು. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದಿರುವ ಎಂ.ಓ-1 ಸೀಮೆ ಎಣ್ಣೆ ಕ್ಯಾನ್, ಎಂ.ಓ-2 ಬೆಂಕಿ ಪೊಟ್ಟಣ ಮತ್ತು ಎಂ.ಓ-3 ಪಂಜನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ವಸ್ತುಗಳನ್ನು ಯಾರು ತೋರಿಸಿದರು ಎಂದು ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ-**

2. ಎಂ.ಓ-1 ರಿಂದ 3 ವಸ್ತುಗಳನ್ನು 1 ನೇ ಆರೋಪಿಯು ಚಾಸಾ-1 ರವರ ಮನೆಗೆ ಬೆಂಕಿ ಹಚ್ಚಲು ತಂದು ಇಟ್ಟಿರುವುದಾಗಿ ತೋರಿಸಿರುತ್ತಾನೆ ಎಂದರೆ ಸರಿ. ಈಗ ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಸಿ.ಎಲ್.ಎ.ಡಿ.ಸಿ. ರವರಿಂದಃ-**

3. ಬ್ರಹ್ಮೂರಿನಿಂದ ಅಲಗೇರಿ ಸುಮಾರು 18 ಕಿ.ಮೀ ಆಗುತ್ತದೆ. ಖಾಯಂ ಆಗಿ ನಾನು ಬ್ರಹ್ಮೂರಿಗೆ ಕೆಲಸಕ್ಕೆ ಹೋಗುವುದಿಲ್ಲ. ನನಗೆ ಯಾವುದೇ ಜಾಗ ತೋರಿಸಿರುವುದಿಲ್ಲ, ಪೊಲೀಸರು ರಸ್ತೆಯ ಮೇಲೆ ಸಹಿ ಪಡೆದುಕೊಂಡಿರುತ್ತಾರೆ. ಎಂ.ಓ-1 ರಿಂದ 3 ವಸ್ತುಗಳನ್ನು ಯಾವ ಕಾರಣಕ್ಕಾಗಿ ಪೊಲೀಸರು ತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ. ಸದರಿ ವಸ್ತುಗಳನ್ನು ಬೆಂಕಿ ಹಚ್ಚಲು ತಂದಿರುತ್ತೇನೆ ಎಂದು 1 ನೇ ಆರೋಪಿಯು ನನ್ನ ಬಳಿ ಹೇಳಿರುವುದಿಲ್ಲ ಹಾಗೂ ಅವುಗಳನ್ನು ತೋರಿಸಿರುವುದಿಲ್ಲ. ಮೂರು ದಿನಗಳ ನಂತರ ಪಂಚನಾಮೆಗೆ ಹೋಗಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ